## ನಿಮ್ಮೊಡನೆ

# ಭ್ರಷ್ಟಾಚಾರಕ್ಕೆ ಹಾಕದೆ ಹೋದರೆ ಮೂಗುದಾರ ಕೊಳೆತು ನಾರುವುದು ವ್ಯವಸ್ಥೆಯ ಇಡೀ ಶರೀರ

ಸತ್ತ ಮಗುವನ್ನು ಬದುಕಿಸಿಕೊಡುವಂತೆ ಮೊರೆಯಿಟ್ಟ ನತದೃಷ್ಟ ತಾಯಿಗೆ, ಬುದ್ಧ ಒಡ್ಡಿದ ಸವಾಲು: ‘ಸಾವಿಲ್ಲದ ಮನೆಯಿಂದ ಸಾಸಿವೆ ತೆಗೆದುಕೊಂಡು ಬಾ’. ವರ್ತಮಾನದಲ್ಲಿ ಅದೇ ಘಟನೆ ಮರುಕಳಿಸಲು ಸಾಧ್ಯವಿದ್ದಿದ್ದರೆ, ಸಾವಿನ ಜಾಗದಲ್ಲಿ ಭ್ರಷ್ಟಾಚಾರವನ್ನು ಗೌತಮ ಹೆಸರಿಸುತ್ತಿದ್ದನೇನೊ! ಸಾವಿಲ್ಲದ ಮನೆಯ ರೂಪಕ ಈಗ ಭ್ರಷ್ಟಾಚಾರವಿಲ್ಲದ ಕ್ಷೇತ್ರಕ್ಕೆ ಹೊಂದುವಂತಿದೆ. ಬುದ್ಧನ ಪ್ರಶ್ನೆ ಬದುಕಿನ ನಶ್ವರತೆಯನ್ನು ಮನವರಿಕೆ ಮಾಡಿಕೊಟ್ಟರೆ, ಭ್ರಷ್ಟಾಚಾರದ ವಿರಾಟ್ ಸ್ವರೂಪ ಸಾರ್ವಜನಿಕ ಬದುಕನ್ನು ಆದ್ಯಂತವಾಗಿ ಆವರಿಸಿಕೊಂಡಿರುವ ಕೊಳಕನ್ನು ಸೂಚಿಸುವಂತಿದೆ. ಭ್ರಷ್ಟಾಚಾರವನ್ನು ‘ನೈತಿಕ ಸಾವು’ ಎಂದು ಭಾವಿಸುವುದಾದರೆ ಬುದ್ಧನ ಸಾಸಿವೆ ಕಥೆಗಿಂತಲೂ ವರ್ತಮಾನ ಹೆಚ್ಚು ಘೋರವಾಗಿದೆ.

ರಸ್ತೆಯಲ್ಲಿನ ಗುಂಡಿಗಳು, ಶಿಕ್ಷಣದ ವ್ಯಾಪಾರೀಕರಣ, ಕುಡಿಯುವ ನೀರು, ಉಸಿರಾಡುವ ಗಾಳಿ ಮತ್ತು ಆಹಾರ ಪದಾರ್ಥಗಳಲ್ಲಿನ ನಿಧಾನವಿಷ – ವೈಯಕ್ತಿಕ ಹಾಗೂ ಸಾರ್ವಜನಿಕ ಬದುಕನ್ನು ನೇರವಾಗಿ ಪ್ರಭಾವಿಸುವ ಸಂಗತಿಗಳಿಂದ ಹಿಡಿದು, ನಮಗೆ ಎದುರಾಗುವ ಪ್ರತಿ ವ್ಯಕ್ತಿ ಹಾಗೂ ಸಂಗತಿಯೂ ಒಂದಲ್ಲಾ ಒಂದು ಬಗೆಯಲ್ಲಿ ಭ್ರಷ್ಟವ್ಯವಸ್ಥೆಯ ಭಾಗವೇ ಆಗಿರುವುದು ವರ್ತಮಾನದ ವ್ಯಂಗ್ಯವಾಗಿದೆ. ಕಡಲು, ಕಾಡು, ಜೀವವೈವಿಧ್ಯವೂ ಭ್ರಷ್ಟವ್ಯವಸ್ಥೆಯ ಹಸಿವೆಗೆ ಇಂಧನಗಳಾಗಿವೆ. ಚುನಾವಣೆಗಳು ಭ್ರಷ್ಟಾಚಾರದ ಉಗಮಸ್ಥಾನಗಳಂತಿವೆ. ನೈತಿಕತೆಗೆ ಕಿಂಚಿತ್ತೂ ಕಿಮ್ಮತ್ತಿಲ್ಲದ ಚುನಾವಣೆಯಲ್ಲಿ ಆರಿಸಿ ಬರುವವರು ನೈತಿಕ ವ್ಯವಸ್ಥೆಯನ್ನು ರೂಪಿಸುವ ಹಾಗೂ ಕಾಪಾಡುವ ಹೊಣೆಗಾರಿಕೆ ನಿರ್ವಹಿಸುತ್ತಾರೆ.

ಒಂದೆಡೆ ಭ್ರಷ್ಟಾಚಾರ ವ್ಯಾಪಕವಾಗಿ ಹಬ್ಬಿದ್ದರೆ, ಇನ್ನೊಂದೆಡೆ ಅದನ್ನು ಹತ್ತಿಕ್ಕುವ ಪ್ರಯತ್ನಗಳು ಚಾಲ್ತಿಯಲ್ಲಿವೆ. ಈ ಪ್ರಯತ್ನಗಳು ತೀರಾ ಕನಿಷ್ಠ ಪ್ರಮಾಣದಲ್ಲಿವೆ ಹಾಗೂ ಬಹುತೇಕ ತೋರಿಕೆಯ ರೂಪದಲ್ಲಷ್ಟೇ ಇವೆ. ಭ್ರಷ್ಟಾಚಾರದ ವಿರುದ್ಧ ಸಿಬಿಐ ತನಿಖೆಗಳನ್ನು ಉದಾಹರಣೆಗೆ ಗಮನಿಸಿ. ಸಿಬಿಐ ತನಿಖೆ ನಡೆಸುತ್ತಿರುವ 6903 ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಉಳಿದಿವೆ ಎಂದು ‘ಕೇಂದ್ರ ಜಾಗೃತ ಆಯೋಗ’ (ಸಿವಿಸಿ) ತನ್ನ ವಾರ್ಷಿಕ ವರದಿಯಲ್ಲಿ ತಿಳಿಸಿದೆ. ಇವುಗಳಲ್ಲಿ 2461 ಪ್ರಕರಣಗಳು ಹತ್ತು ವರ್ಷಗಳಿಗಿಂತ ಹೆಚ್ಚು ಅವಧಿಯಿಂದ ಬಾಕಿಯಿವೆ; 361 ಪ್ರಕರಣಗಳು ಇಪ್ಪತ್ತು ವರ್ಷಗಳಿಗಿಂತಲೂ ಹೆಚ್ಚು ಅವಧಿಯಿಂದ ಬಾಕಿಯಿವೆ. ಇನ್ನೂ 658 ಪ್ರಕರಣಗಳು ಸಿಬಿಐ ಮುಂದೆ ತನಿಖೆಗೆ ಸಾಲುಗಟ್ಟಿ ನಿಂತಿವೆ. ಅತಿಯಾದ ಕೆಲಸ, ಮಾನವ ಸಂಪನ್ಮೂಲದ ಕೊರತೆ ಮತ್ತು ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರಗಳು ಅನುಮತಿ ನೀಡುವಲ್ಲಿನ ವಿಳಂಬ – ಇವೆಲ್ಲವೂ ಭ್ರಷ್ಟಾಚಾರ ಪ್ರಕರಣಗಳು ನನೆಗುದಿಗೆ ಬೀಳಲು ಕಾರಣಗಳಾಗಿವೆ. ಲೋಕಾಯುಕ್ತ ದಾಳಿಗಳಂತೂ ಸಿನಿಮೀಯವಾಗಿವೆ. ಆಗಾಗ್ಗೆ ನಡೆಯುತ್ತಲೇ ಇರುವ ಈ ದಾಳಿಗಳಲ್ಲಿ – ಅಧಿಕಾರಿಗಳ ಕೋಟ್ಯಂತರ ರೂಪಾಯಿ ಕಪ್ಪು ಹಣ ಬೆಳಕಿಗೆ ಬರುತ್ತದೆ; ಅಕ್ರಮ ಸಂಪತ್ತಿನ ವಿವರಗಳು ಫೋಟೊ, ವಿಡಿಯೊ ರೂಪದಲ್ಲಿ ರೋಚಕವಾಗಿ ಪ್ರಕಟಗೊಳ್ಳುತ್ತವೆ. ಆದರೆ, ಭ್ರಷ್ಟಾಚಾರ ಪ್ರಕರಣದಲ್ಲಿ ಶಿಕ್ಷೆ ಅನುಭವಿಸಿದವರ ಸುದ್ದಿ ಎಲ್ಲಿಯೂ ಕಾಣಿಸುವುದಿಲ್ಲ. ಲೋಕಾಯುಕ್ತ ಕಾರ್ಯಾಚರಣೆಯ ಸ್ವರೂಪ ‘ಹೋರಾಟ ಚಾಲ್ತಿಯಲ್ಲಿದೆ, ಪರಿಣಾಮ ಶೂನ್ಯ’ ಎನ್ನುವಂತಿದೆ.

ಭ್ರಷ್ಟಾಚಾರ ಪ್ರಕರಣಗಳು ಹಳ್ಳ ಹಿಡಿಯುವುದರ ಹಿಂದೆ ರಾಜಕಾರಣಿಗಳ ಪಾತ್ರ ಎದ್ದುಕಾಣಿಸುವಂತಿದೆ. ಕೈಗೆ ಗಲೀಜು ಮೆತ್ತಿಕೊಳ್ಳದ ಒಬ್ಬನೇ ಒಬ್ಬ ರಾಜಕಾರಣಿ ಈ ದೇಶದಲ್ಲಿ ಇರಲಿಕ್ಕಿಲ್ಲ. ಓರ್ವ ರಾಜಕಾರಣಿ ಕಳಂಕಮುಕ್ತನಾಗಿದ್ದಾನೆ ಎನ್ನುವುದಾದರೆ, ಆ ರಾಜಕಾರಣಿ ಅಧಿಕಾರದಿಂದ ದೂರವಿದ್ದಾನೆ ಎಂದರ್ಥ. ಅಧಿಕಾರ ಹಾಗೂ ಭ್ರಷ್ಟಾಚಾರ ಪರ್ಯಾಯ ಪದಗಳು ಎನ್ನುವಂತಹ ಸ್ಥಿತಿ ಇಂದಿನದು. ಭ್ರಷ್ಟಾಚಾರ ಎಷ್ಟು ಸಹಜವಾಗಿದೆ ಎಂದರೆ, ರಾಜಕಾರಣಿಯೊಬ್ಬ ಭ್ರಷ್ಟಾಚಾರದಿಂದ ದೂರವುಳಿಯುವುದು ಸಾಧ್ಯವಿದೆ ಎಂದು ಯಾರೊಬ್ಬರೂ ನಂಬುವ ಸ್ಥಿತಿಯಲ್ಲಿಲ್ಲ. ಭ್ರಷ್ಟಾಚಾರವೇ ಮೂರ್ತಿವೆತ್ತಂತೆ ಕಾಣಿಸುವ ರಾಜಕಾರಣಿಗಳು, ತಮ್ಮ ವಿರುದ್ಧವೇ ಹೋರಾಟ ನಡೆಸುತ್ತಾರೆಂದು ಭಾವಿಸಲಾಗದು. ಈ ರಾಜಕಾರಣಿಗಳು ದೇಶದ ಪರಿಸ್ಥಿತಿಯನ್ನು ಎಷ್ಟು ಹೀನಾಯಸ್ಥಿತಿಗೆ ತಂದಿದ್ದಾರೆಂದರೆ, ‘ಭ್ರಷ್ಟಾಚಾರ ಗ್ರಹಿಕೆ ಸೂಚ್ಯಂಕ 2023’ರ ಪಟ್ಟಿಯಲ್ಲಿ, ಜಗತ್ತಿನ 180 ದೇಶಗಳ ಪೈಕಿ ಭಾರತ 93ನೇ ಸ್ಥಾನ ಪಡೆದಿದೆ. 2022ರಲ್ಲಿ 85ನೇ ಸ್ಥಾನದಲ್ಲಿತ್ತು. ತಜ್ಞರು ಮತ್ತು ಉದ್ಯಮಿಗಳ ಅಭಿಪ್ರಾಯವನ್ನು ಆಧರಿಸಿ ‘ಟ್ರಾನ್ಸ್‌ಪರೆನ್ಸಿ ಇಂಟರ್‌ನ್ಯಾಷನಲ್ ಸಂಸ್ಥೆ’ ಪ್ರತಿ ವರ್ಷ ಈ ಸೂಚ್ಯಂಕ ಸಿದ್ಧಪಡಿಸುತ್ತದೆ.

ಭ್ರಷ್ಟಾಚಾರದ ಪ್ರಮಾಣ ಆತಂಕ ಹುಟ್ಟಿಸುವಂತಿದ್ದರೂ, ಭ್ರಷ್ಟರಿಗೆ ಶಿಕ್ಷೆಯಾದ ಪ್ರಕರಣಗಳು ನಗಣ್ಯ. ಭ್ರಷ್ಟ ವ್ಯವಸ್ಥೆಯಲ್ಲಿಯೇ ಇಂದಿನ ಮಕ್ಕಳು ಹಾಗೂ ಮುಂದಿನ ತಲೆಮಾರುಗಳ ಬದುಕು ಸಾಗಬೇಕೆನ್ನುವ ಕಲ್ಪನೆಯೇ ಅಸಹನೀಯ. ಚಿಕಿತ್ಸೆ ಆರಂಭವಾಗದೆ ಹೋದರೆ ವ್ಯವಸ್ಥೆಯ ಇಡೀ ದೇಹ ಕೊಳೆಯುವುದು ನಿಶ್ಚಿತ. ಚಿಕಿತ್ಸೆ ಆರಂಭಿಸುವವರು ಯಾರು ಎನ್ನುವುದೇ ಸದ್ಯಕ್ಕೆ ಬಗೆಹರಿಯದ ಪ್ರಶ್ನೆ.

**■ ರಘುನಾಥ ಚ.ಹ.**

ಕಡಲು, ಕಾಡು, ಜೀವವೈವಿಧ್ಯ – ಭ್ರಷ್ಟವ್ಯವಸ್ಥೆಯ ಹಸಿವೆಗೆ ಇಂಧನಗಳಾಗಿವೆ. ಚುನಾವಣೆಗಳು ಭ್ರಷ್ಟಾಚಾರದ ಉಗಮಸ್ಥಾನಗಳಾಗಿವೆ. ನೈತಿಕತೆಗೆ ಕಿಂಚಿತ್ತೂ ಕಿಮ್ಮತ್ತಿಲ್ಲದ ಚುನಾವಣೆಯಲ್ಲಿ ಆರಿಸಿ ಬರುವವರು ನೈತಿಕ ವ್ಯವಸ್ಥೆಯನ್ನು ರೂಪಿಸುವ ಹಾಗೂ ಕಾಪಾಡುವ ಹೊಣೆಗಾರಿಕೆ ನಿರ್ವಹಿಸುತ್ತಿದ್ದಾರೆ.



ಈಶ್ವರ್